(ಈ) ರಾಜ್ಯದಲ್ಲಿ ತಂಬಾಕು ಗಿಡದ ಅಭಿವೃದ್ಧಿ ಹಾಗೂ ಸಂಶೋಧನೆ ಕಾರ್ಯದ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ ವ್ಯವಸಾಯ, ಪಶು ಸಂಗೋಪನೆ ಹಾಗೂ ಮತ್ಸ್ಯೋದ್ಯಮ ಮಂತ್ರಿಗಳು).—

(ಅ) ಈಗ ರಾಜ್ಯದಲ್ಲಿ ಉತ್ಪತ್ತಿಯಾಗುವ ತಂಬಾಕು ಗಿಡದ ಪ್ರಮಾಣ ೨,೧೪೦ ಟನ್ನುಗಳು.

(ಆ) ತಂಬಾಕು ಜಾತಿಯ ಗಿಡಗಳು ರಾಜ್ಯದ ಈ ಕೆಳಕಂಡ ಪ್ರದೇಶಗಳಲ್ಲಿ ಬೆಳೆಯುತ್ತದೆ.

೧. ಬಳ್ಳಾರಿ ಜಿಲ್ಲೆಯ ಸಂಡೂರು, ಕೂಡ್ಲಿಗಿ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ.

೨. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಹೊಳಲಕೆರೆ,ಹೊಸದುರ್ಗ, ಮೊಳಕಾಲ್ಮೂರು ಮತ್ತು ಜಗಳೂರು ತಾಲ್ಲೂಕುಗಳಲ್ಲಿ.

೩. ಬೆಳಗಾಂ ಜಿಲ್ಲೆಯ ಗೋಕಾಕ್, ಬಾಗಲಕೋಟೆ, ಬೆಳಗಾಂ ಮತ್ತು ಗದಗ ತಾಲ್ಲೂಕುಗಳಲ್ಲಿ.

೪. ತುಮಕೂರು ಜಿಲ್ಲೆಯ ಗುಬ್ಬಿ, ಚಿಕ್ಕನಾಯ್ಕನಹಳ್ಳಿ ತುಮಕೂರು, ತಿಪಟೂರು, ತುರುವೆಕೆರೆ, ಶಿರಾ, ಪಾವಗಡ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ.

೫. ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ

೬. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ, ಹಳಿಯಾಳ ಮತ್ತು ಸಿರಸಿ ತಾಲ್ಲೂಕುಗಳಲ್ಲಿ.

೭. ಧಾರವಾಡ ಜಿಲ್ಲೆಯ ಹಂಬ್ಬಳ್ಳಿ, ಕಲಘಟಗಿ, ಹಾನಗಲ್, ಶಿಗ್ಗಾಂವ್ ಮತ್ತು ಧಾರವಾಡ ತಾಲ್ಲೂಕುಗಳಲ್ಲಿ.

೮. ಶಿವಮೊಗ್ಗ ಜಿಲ್ಲೆಯ ಚೆನ್ನಗಿರಿ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ.

೯. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಮತ್ತು ಕಡೂರು ತಾಲ್ಲೂಕುಗಳಲ್ಲಿ.

೧೦. ಬೆಂಗಳೂರು ಜಿಲ್ಲೆಯ ಮಾಗಡಿ ಚನ್ನಪಟ್ಟಣ ದೇವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ರಾಮನಗರ ತಾಲ್ಲೂಕುಗಳಲ್ಲಿ.

೧೧. ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ.

(ಇ) ಹೌದು.

(ಈ) ತುಮಕುರಿಗಿಡದ ಅಭಿವೃದ್ಧಿ ಕಾರ್ಯದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ. ತುಮುರಿ ಬೆಳೆಯನ್ನು ಹೆಚ್ಚಿಸುವ ಸಲುವಾಗಿ ತುಮುರಿ ಬೀಜಗಳನ್ನು ನೆಡುತೋಪುಗಳಲ್ಲಿ ಬಿತ್ತಲಾಗುತ್ತಿದೆ. ತುಮುರಿ ಗಿಡಗಳ ಉತ್ತಮ ಬೆಳವಣಿಗೆಗಾಗಿ ಸಕಲ ಪೋಷಣೆಗಳನ್ನು ಮಾಡಲಾಗುತ್ತಿದೆ. ವಂಧ್ಯ ಪ್ರದೇಶದ ಉತ್ತಮ ಗುಣವಂಟ್ಟದ ತಂಬಾಕು ಬೀಜಗಳನ್ನು ತಂದು ನವ್ಯ ಸಸ್ಯ ಕ್ಷೇತ್ರಗಳಲ್ಲಿ ತುಮುರಿ ಬೆಳೆಯನ್ನು ಹೆಚ್ಚಿಸುವುದಕ್ಕಾಗಿ ಬಿತ್ತಲಾಗಿದೆ. ಮುಂದಿನ ವರ್ಷದಿಂದ ಈ ಸಸಿಗಳನ್ನು ನೆಡುತೋಪುಗಳಲ್ಲಿ ಹಚ್ಚಿ ಅವುಗಳ ಸಂಖ್ಯೆಯನ್ನು ಹೆಚ್ಚಿಸಲು ಕೆಲಸ ಕೈಗೊಳ್ಳಲಾಗುವುದು. ಅರಣ್ಯ ಇಲಾಖೆಯ ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗದಿಂದ ತಂಬಾಕು ಎಲೆಯ ಉತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ಸಂಶೋಧನೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಚನ್ನಪಟ್ಟಣ ರೇಷ್ಮೆ ಜೂಟಿ ಗಿರಣಿಯಲ್ಲಿ ಅವ್ಯವಹಾರದ ಬಗ್ಗೆ

೧೮೨೮. ಶ್ರೀ ಎಂ. ವರದೇಗೌಡ.—ಮಾನ್ಯ ರೇಷ್ಮೆ, ಪಶು ಸಂಗೋಪನೆ ಮತ್ತು ಮತ್ಸ್ಯೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚನ್ನಪಟ್ಟಣ ರೇಷ್ಮೆ ಜೂಟಿನ ಗಿರಣಿಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಅ) ಹಾಗಿದ್ದಲ್ಲಿ ಆ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮಂತ್ರೋದ್ಯಮ ಸಚಿವರು).—

ಅ) ರೇಷ್ಮೆ ಜೂಟಿನ (ಸಿಲ್ಕ್ ವೇಸ್ಟ್) ದಾಸ್ತಾನಿನಲ್ಲಿ ಕಡಿಮೆಯಿರುವುದು ಗಮನಕ್ಕೆ ಬಂದಿರುತ್ತದೆ.

ಆ) ಈ ವಿಷಯವು ತನಿಖೆಯ ಹಂತದಲ್ಲಿದೆ.

ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ರೇಷ್ಮೆ ಇಲಾಖೆಯ ಫಲಾನುಭವಿಗಳ ಸಂಖ್ಯೆ

೧೭೧೧ ಶ್ರೀ ಪಿ. ಸಿ. ವಿಷ್ಣುಸ್ವಾಮಯ್ಯ.—(ದೇವನ ಹಳ್ಳಿ) ಮಾನ್ಯ ರೇಷ್ಮೆ ಪಶು ಸಂಗೋಪನೆ ಹಾಗೂ ಮಂತ್ರೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೬ನೇ ಸಾಲಿನಲ್ಲಿ ವಿಶೇಷ ಘಟಕದ ಯೋಜನೆಯ ಅಡಿಯಲ್ಲಿ ಇಲಾಖೆಯು ಫಲಾನುಭವಿಗಳಿಗೆ ಚಂದ್ರಿಕೆ, ತಟ್ಟೆ, ಮಂತ್ರ ಗೊಬ್ಬರಗಳನ್ನು ಪಡೆದ ರಾಜ್ಯದ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು,

ಆ) ಇದರಲ್ಲಿ ದೇವನ ಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ಫಲಾನುಭವಿಗಳು ಇದ್ದಾರೆ ?

ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ, (ರೇಷ್ಮೆ, ಪಶುಸಂಗೋಪನೆ ಮತ್ತು ಮಂತ್ರೋದ್ಯಮ ಸಚಿವರು).—

ಅ) ೧೨೭೦

ಆ) ೩೧೧

ಬೆಂಗಳೂರು ಎನ್. ಜಿ. ಇ. ಎಫ್. ಸ್ಥಳಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬಂಕನ್ನು ಹಾಕುವುದರ ಬಗೆಗೆ

೧೨೫೨ ಶ್ರೀ ಗೋಪಾಲ ಮಯ್ಯಂದ ಕಾನಡೆ (ಸಿಪಿಐ) ಮಾನ್ಯ ಕೈಗಾರಿಕೆ ಮಂತ್ರಿ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಎನ್. ಜಿ. ಇ. ಎಫ್. ನ ಸ್ಥಳದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬಂಕನ್ನು ಸ್ಥಾಪನೆ ಮಾಡಲು ಸಿದ್ಧತೆ ನಡೆಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಆ) ಈ ಪೆಟ್ರೋಲ್ ಬಂಕ್‌ನ ಪ್ರದೇಶ ಯಾರಿಗೆ ಸೇರಿದ್ದು, ಈ ಪೆಟ್ರೋಲ್ ಬಂಕಿನ ಮಾಲೀಕರು ಯಾರು ಮತ್ತು ಆ ಪ್ರದೇಶದ ವಿಸ್ತೀರ್ಣ ಎಷ್ಟು ?

ಶ್ರೀ ಜೆ. ಹೆಚ್. ಪಟೇಲ್(ಕೈಗಾರಿಕೆ ಮಂತ್ರಿ ವಿದ್ಯುಚ್ಛಕ್ತಿ ಸಚಿವರು).—

ಅ) ಹೌದು.

ಆ) ಈ ಪ್ರದೇಶ ಎನ್. ಜಿ. ಇ. ಎಫ್. ಗೆ ಸೇರಿದ್ದು ಪೆಟ್ರೋಲ್ ಬಂಕಿನ ಮಾಲೀಕರು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್(ಭಾರತ ಸರ್ಕಾರದ ಉದ್ಯಮ) ಈ ಜಪಿಂಸಿನ ವಿಸ್ತೀರ್ಣವು ೫೬ ಮೀಟರ್ ೩೩ ಮೀಟರ್.

ಆನೇಕಲ್ ತಾಲ್ಲೂಕಿನಲ್ಲಿ ವಿದ್ಯುದ್ದೀಕರಣ ಕಾರ್ಯ.

೧೦೦೧ (ಡಿ) ಶ್ರೀ ಎಂ. ಪಿ. ಕೇಶವಮೂರ್ತಿ.—(ಆನೇಕಲ್) ಮಾನ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆನೇಕಲ್ ತಾಲ್ಲೂಕಿನ ಕಚ್ಚಾ (ರೆವಿನ್ಯೂ) ಮತ್ತು ಕಂಗ್ರಾವಂಗಳಲ್ಲಿ ಎಷ್ಟು ಗ್ರಾಮಂಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ. ಹಾಗೂ ಎಷ್ಟು ಗ್ರಾಮಂಗಳಿಗೆ ಒದಗಿಸಿಲ್ಲ ?